**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.43-2018

ದೋ.ಸಾ. 18
ಫ್ರಾ.ಸಾ. 08
ಪ್ರ.ವ.ಬೊ.ದಿನಾಂಕ. 27-06-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ನಾರಪ್ಪ ಯಾನೇ ನರೇಶಪ್ಪ |
| ತಂದೆ / ಗಂಡನ ಹೆಸರು | - | ಶರಣಪ್ಪ |
| ವಯಸ್ಸು | - | 65 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಗಾಂಧಿನಗರ , ದಾವಣಗೆರೆ . |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1) ನನಗೆ ಚಾಸಾ-11 ಹಾಗೂ 16 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ನಾನು ಆರೋಪಿತರ ಮನೆಯಿಂದ 2 ಮನೆ ಬಿಟ್ಟು ವಾಸವಾಗಿದ್ದೇನೆ. ಚಾಸಾ-11 ರವರು ಮೆಕ್ಕೆಜೋಳದ ವ್ಯಾಪಾರ ಮಾಡುತ್ತಿದ್ದರು. ಅವರ ಪರಿಚಯ ನನಗೆ 20-25 ವರ್ಷಗಳಿಂದ ಇದೆ. ನಾನು ಶಾಂತಲಿಂಗಪ್ಪನಿಗೆ ಆರೋಪಿ 1 ರವರಿಗೆ ಹೆಣ್ಣು ಬೇಕು ನೋಡಿ ಎಂದು ಹೇಳಿದ್ದೆನು ಅವರು ನೋಡಿದ್ದರು. ಮದುವೆಯಾಗಿದೆ ಮದುವೆಗಿಂದತ ಮೊದಲು ಮಾತುಕತೆಯಾಗಿ 25 ತೊಲೆ ಬಂಗಾರ ಎರುಡೂವರೆ ಲಕ್ಷ ಹಣ ಬೈಕಿಗೆ ರೂ.65,000 ಕೊಡಬೇಕೆಂದು ಮಾತುಕತೆ ಯಾಗಿತ್ತು ಆ ರೀತಿ ನಮ್ಮ ಹೊಲದಲ್ಲಿ ಚಾಸಾ-11 ಶಾಂತಲಿಂಗಪ್ಪ ಹೇಳಿದನು ಅವರು ಮಾತುಕತೆಯಾಡಿದ್ದರೋ ಇಲ್ಲವೋ ಗೊತ್ತಿಲ್ಲ. ನನ್ನನ್ನು ಕರೆದಿರಲಿಲ್ಲ.

2) ಮದುವೆಗೆ ನಾನು ಹೋಗಿರಲಿಲ್ಲ. ಮದುವೆಯ ನಂತರ ಕುಸುಮ ಗಾಂಧಿನಗರದಲ್ಲಿ ಆರೋಪಿತರೊಂದಿಗ ವಾಸವಾಗಿದ್ದರು. ಆರೋಪಿತರು ಅವಳನ್ನು ಯಾವ ರೀತಿ ನೋಡಿಕೊಳ್ಳುತ್ತಿದ್ದರುಎಂದು ನನಗೆ ಗೊತಿಲ್ಲ. ಕುಸುಮಳಿಗೆ ಒಂದು ಮಗುವಿದೆ. ಯಾವುದೇ ಪಂಚಾಯಿತಿ ಆಗಿರುವುದು ಗೊತ್ತಿಲ್ಲ. ಒಂದು - ಎರಡು ವರ್ಷಗಳ ಹಿಂದೆ ಕುಸುಮ ತೀರಿಕೂಂಡಿದ್ದಾಳೆ. ಹೇಗೆ ತೀರಿಕೊಂಡಲು ಎಂದು ಗೂತ್ತಿಲ್ಲ. ಅವಳು ನಮ್ಮ ಊರಿನಲ್ಲಿ ತೀರಿಕೊಂಡಿದ್ದಾಳೆ. ಪೊಲೀಸರು ನನಗೆ ವಿಚಾರಣೆ ಮಾಡಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

1) ನಾನು ಮಾತುಕತೆ ಸಮಯದಲ್ಲಿ ಹಾಜರಿದ್ದು, ಆರೋಪಿತರ ಬೇಡಿಕೆಯ ಮೇರೆಗೆ ವರದಕ್ಷಿಣೆ ಅಂತ ಎರಡೂವರೆ ಲಕ್ಷ ಹಣ , 25 ತೊಲೆ ಬಂಗಾರ ಹಾಗೂ ರೂ.65,000/- ಬೈಕಿಗಾಗಿ ಕೊಟ್ಟಿದರು ಎನ್ನುವುದು ಸುಳ್ಳು .

2) ಮದುವೆಯ ನಂತರ ಆರೋಪಿ 1 ರವರ ತಾಯಿ ಕುಸುಮಳಿಗೆ ಏನೂ ಕೆಲಸ ಬರುವುದಿಲ್ಲ ಎಂದು ಹೇಳಿ ಆರೋಪಿತರು ಅವಳಿಗೆ ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎನ್ನುವುದು ಸುಳ್ಳು. ಆರೋಪಿತರು ಮೃತಳೊಂದಿಗ

ಪದೇ ಪದೇ ಜಗಳ ಮಾಡಿ ಹೊಡೆ -ಬಡಿ ಮಾಡಿ ಮನೆಯಿಂದ ಹೊರಗೆ ಕಳುಹಿಸುತ್ತಿದ್ದರು ಎನ್ನುವುದು ಸುಳ್ಳು. ಆ ಕುರಿತಾ 5-6 ಬಾರಿ ಪಂಚಾಯಿತಿ ಆಯಿತು ಎನ್ನುವುದು ಸುಳ್ಳು. ಆರೋಪಿ 1 ಮೃತ ಕುಸುಮಳಿಗೆ ತಾನು ವ್ಯಾಪಾರ ಮಾಡಬೇಕಾಗಿದ ತವರು ಮನೆಯಿಂದ ಹಣ ತೆಗೆದುಕೂಂಡು ಬಾ ಎಂದು ಮೇಲಿಂದ ಮೇಲೆ ತೊಂದರೆ ಕೊಡುತ್ತಿದ್ದ ಎನ್ನುವುದು ಸುಳ್ಳು.

3) ಆರೋಪಿ 1 ಜೋರಾಗಿ ಮೃತಳಿಗೆ ಬೈಯುವುದು ಕೇಳಿ ನಾನು ಹೋಗಿ ವಿಚಾರ ಮಾಡಿದೆ ಎನ್ನುವುದು ಸುಳ್ಳು. ಆರೋಪಿತರು ತೊಂದರೆಯಿಂದ ಮೃತಳು ಸತ್ತಳು ಎನ್ನುವುದು ಸುಳ್ಳು. ನನಗೆ ಪೊಲೀಸುರವಿಚಾರಣೆ ಮಾಡಿದಾಗ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನಾನು ನೀಡಿದ್ದೇನೆ ಎನ್ನುವುದು ಸುಳ್ಳು. ಸದರಿ ಹೆಳಿಕೆಯನ್ನು ನಿಪಿ-45 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಮನೆಯ ಪಕ್ಕದವರಾಗಿದ್ದರಿಂದ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೆನೆ ಎನ್ನುವುದು ಸುಳ್ಳು.

**<u>ಪಾಟೀಸವಾಲುಃ ಆರೋಪಿ ಆರ್ ಕೆ ವಕೀಲರು ಆರೋಪಿ ನಂ. 1 ರಿಂದ 3 ಪರ ವಕೀಲರಿಂದ.</u>**

ನನಗೆ ಶಾಂತಲಿಂಗಪ್ಪ ಹೊಲದಲ್ಲಿ ಕುಸುಮಳ ಮದುವೆಗೆ 25 ತೊಲೆ ಬಂಗಾರ, ಎರಡೂವರೆ ಲಕ್ಷ ಹಣ ಹಾಗೂ ರೂ. 65,000/- ಹಣ ಬೈಕಿಗಾಗಿ ಕೊಡಲು ಒಪ್ಪಿದ್ದೇವೆ ಮಾತುಕತೆಯಾಗಿತ್ತು ಎನ್ನುವುದು ಸುಳ್ಳು

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.43-2018

ದೋ.ಸಾ. 26
ಫ್ರಾ.ಸಾ. 07
ಪ್ರ.ವ.ಬೊ.ದಿನಾಂಕ. 27-06-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶಿವಮೂರ್ತಿ ಯಾನೇ ಶಿವಮೂರ್ತಪ್ಪ |
| ತಂದೆ / ಗಂಡನ ಹೆಸರು | - | ನಾಗಪ್ಪ |
| ವಯಸ್ಸು | - | 60 |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಲಿಂಗದಹಳ್ಳಿ ದಾವಣಗೆರೆ ತಾಲ್ಲೂಕು. |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1) ಚಾಸಾ-20 ನನ್ನ ಅಣ್ಣ. ಚಾಸಾ-23 ನನ್ನ ತಂಗಿ, ಚಾಸಾ-16 ನನ್ನ ತಂಗಿಯ ಗಂಡ ಈಗ ಅವರು ತೀರಿಕೊಂಡಿರುತ್ತಾರೆ. ಚಾಸಾ-11 ನನ್ನ ತಂಗಿಯ ಗಂಡನ ಅಣ್ಣ, ಚಾಸಾ-1 ಮತ್ತು ಮೃತ ಕುಸುಮ ನನ್ನ ತಂಗಿಯ ಮಕ್ಕಳು.

2) ಆರೋಪಿ ನಂ. 1 ಮೃತಳ ಗಂಡ ಹಾಗೂ ಆರೋಪಿ 2 ಮತ್ತು 3 ಮಾವ ಮತ್ತು ಅತ್ತೆ. ಚಾಸಾ-18 ರವರ ಮುಖಾಂತರ ಮದುವೆ ಪ್ರಸ್ತಾಪ ಬಂದಿತ್ತು . ಅದಾದ ನಂತರ ಎರಡೂ ಪಕ್ಷಗಳಿಗೆ ಒಪಿಗೆ ಆಗಿತ್ತು ನಂತರ ನಾವು ಮಾತುಕತೆಗಾಗಿ ಗಂಡಿನ ಮನೆಗೆ ಹೋದೆವು. ಮಾತುಕತೆಗಾಗಿ ನಾನು ಚಾಸಾ20, 11, 16 ಮತ್ತು 22 ಹೋಗಿದ್ದೆವು. ಚಾಸಾ-18 ಮತ್ತು ಆರೋಪಿತರು ಹಾಗೂ ಅವರ ಸಂಬಂಧಿಕರು ಸಹ ಹಾಜರಿದ್ದರು.

3) ಆರೋಪಿ ಕಡಯಿಂದ 3 ಲಕ್ಷ ದುಡ್ಡು 25 ತೊಲೆ ಬಂಗಾರ ಹಾಗೂ ಒಂದು ಬೈಕು ಕೇಳಿದರು. ನಾವು ಎರಡೂವರೆ ಲಕ್ಷ ಹಣ, 25 ತೊಲೆ ಬಂಗಾರ ಹಾಗೂ ಬೈಕಿಗಾಗಿ ರೂ. 65,000 ಹಣ ಕೊಡಲು ಒಪ್ಪಿದೆವು . 25 ತೊಲೆ ಬಂಗಾರದಲ್ಲಿ 5 ತೊಲೆ ಆರೋಪಿ ನಂ.1 ಗೆ ಹಾಕಬೇಕು ಹಾುಗಾ 20 ತೊಲೆ ಹೆಣ್ಣಿಗೆ ಹಾಕಬೇಕು ಎಂದು ಮಾತುಕತೆ ಆಯಿತು. ಮದುವೆ ಖರ್ಚನ್ನು ಹೆಣ್ಣಿನ ಕಡೆಯವರೇ ಮಾಡಬೇಕೆಂದು ಮಾತುಕತೆ ಆಯಿತು.

4) ಮದುವೆ ಮಾಡಕೊಳ್ಳಲು ನಾವು ಒಪ್ಪಿ ನಿಶ್ಚಿತಾರ್ಥ ನಂತರ ದಿಃ 02-06-2013 ರಂದು ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಆರೋಪಿ 1 ಮತ್ತು ಮೃತಳ ಮದುವೆಯಾಯಿತು. ನಾವು ಹಾಕುವ ಬಂಗಾರದಲ್ಲಿ 5 ತೊಲೆ ಜಾಸ್ತಿಯಾಗಿದ್ದು, ಮಗಳಿಗೆ ಕೊಡುವುದಿದೆ ಎಂದು ನಾವು ಹಾಕಿದೆವು. ಪಾತ್ರೆಗಳು, ಬಾಕಿ ವರದಕ್ಷಿಣೆ ಹಣ , ಬಂಗಾರ ನಾವು ಕೊಟ್ಟೆವು.

5) ಮದುವೆಯ ನಂತರ ಮೃತಳು ಗಾಂಧಿನಗರ ಗ್ರಾಮದಲ್ಲಿ ಆರೋಪಿತರು ಮತ್ತು ಮೃತಳು ಸಂಸಾರ ನಡೆಸಿದರು. ಮೊದಲು ಮೃತಳನ್ನು ಚೆನ್ನಾಗಿ ನೋಡಿಕೊಂಡರು, ಹಾಗೂ ಒಂದು ವರ್ಷ ಅನ್ಯೋನ್ಯವಾಗಿದ್ದು, 2015 ರಲ್ಲಿ ಗಂಡು ಮಗು ಜನಿಸಿತು. ಮಗುವಿನ ಬಾಣಂತನ ತವರುಮನೆಯಲ್ಲಿ ಆಯಿತು. ಬಾಣಂತನದ ನಂತರ ಕುಸುಮಳನ್ನು ಗಂಡನ ಮನೆಗೆ ಕಳುಹಿಸಿದೆವು. ಸ್ವಲ್ಪ ದಿವಸ ಅವಳನ್ನು ಚೆನ್ನಾಗಿಟ್ಟುಕೊಂಡು ಮತ್ತೆ

ತೊಂದರೆ ಕೊಡಲು ಪ್ರಾರಂಭಸಿದರು. ಆರೋಪಿತರು ಅವಳಿಗೆ ಜಾಸ್ತಿ ವರದಕ್ಷಿಣೆ ಕೇಳಿ ಕಿರುಕುಳ ಕೊಡುತ್ತಿದ್ದರು.

6) ಆರೋಪಿತರು ಕುಸುಮಳಿಗೆ ನಿನಗೇನೂ ಕೆಲಸ ಬರುವುದಿಲ್ಲ ಎಂದು ಹೇಳಿ ತೊಂದರೆ ಕೊಡುತ್ತಿದ್ದರು ಹಾಗೂ ಅವಳಿಗಿಂತ ಚೆನ್ನಾಗಿರುವ ಹೆಚ್ಚಿಗೆ ವರದಕ್ಷಿಣೆ ಕೊಡುವ ಹೆಣ್ಣು ಸಿಗುತ್ತದೆ ಎಂದು ತೊಂದರೆ ಕೊಡುತ್ತಿದ್ದರು. ಹಾಗೂ 2016 ರಲ್ಲಿ ಗಲಾಟೆ ಮಾಡಿ ಕುಸುಮಳನ್ನು ತವರು ಮನೆಗೆ ಕಳುಹಿಸಿದರು.

7) ನಾನು ಮತ್ತು ನನ್ನ ಅಣ್ಣ ಅವಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿ ರಾಜಿ ಪಂಚಾಯಿತಿ ಮಾಡಿ ಅವಳನ್ನು ಅಲ್ಲಿಗೆ ಬಿಟ್ಟು ಬಂದೆವು. ಮತ್ತೆ ಆರೋಪಿತರು ಹೊಡೆ-ಬಡಿ ಮಾಡಿ ಕುಸುಮಳನ್ನು ಹೊರಗೆ ಹಾಕಿದರು. ನಾನು , ಶಾಂತಪ್ಪ, ಸಿದ್ದಪ್ಪ ಮತ್ತು ಕುಸುಮಳ ಅಣ್ಣ ಅಲ್ಲಿಗೆ ಹೋಗಿ ರಾಜಿ ಪಂಚಾಯಿತಿ ಮಾಡಿಸಿ, ಕುಸುಮ ನನಗೆ ಗಂಡು ಮಗು ಆಗಿದೆ, ನಾನು ಅನುಸರಿಸಿಕೊಂಡು ಹೋಗುತ್ತೇನೆ ಎಂದು ಹೇಳಿದ ಕಾರಣ ಅಲ್ಲಿಯೇ ಬಿಟ್ಟು ಬಂದೆವು .

8) ದಿಃ 18-08-2017 ರಂದು ರಾತ್ರಿ 10-00 ಗಂಟೆಗೆ ಕುಸುಮ ನನ್ನ ಅಳಿಯ ಹನುಮಂತಗೆ ಫೋನು ಮಾಡಿ ಅವಳನ್ನು ಬಹಳ ಹೊಡೆಯುತ್ತಿದ್ದಾರೆ ಜೀವಂತ ಉಳಿಸುವುದಿಲ್ಲ ಬಂದು ಕರೆದುಕೊಂಡು ಹೋಗು ಎಂದು ಹೇಳಿದಳು. ನಮಗೆ ಹನುಮಂತ ಫೋನು ಮಾಡಿ ತಿಳಿಸಿದರು. ನಾವು ಬೆಳಿಗ್ಗೆ ಹೋಗಿ ಸಮಸ್ಯೆ ಬಗೆಹರಿಸೋಣ ಎಂದು ಹೇಳಿದೆವು.

9) ದಿಃ 19-08-2017 ರಂದು ಹನುಮಂತ ಫೋನು ಮಾಡಿ ಆರೋಪಿ ನಂ.1 ಫೋನು ಮಾಡಿ ಆತನಿಗೆ ಕುಸುಮ ಸತ್ತಿದ್ದಾಳೆ ಎಂದು ಹೇಳಿದರು, ನಮಗೆ ಬನ್ನಿ ಎಂದು ಹೇಳಿದರು ಹಾಗೂ ನಾವು ಗಾಂಧಿನಗರಕ್ಕೆ ಬರುತ್ತೇವೆ ನೀವು ಅಲ್ಲಿಗೆ ಬನ್ನಿ ಎಂದು ಹೇಳಿದೆವು.

10) ನಾವು ಗಾಂಧಿನಗರಕ್ಕೆ ಹೋದಾಗ ಜನ ಸೇರಿದ್ದರು. ಮೇಲಿನ ರೂಮಿಗೆ ಹೋಗಿ ನೋಡಿದಾಗ ಕಸುಮ ಸತ್ತಿದ್ದಳು. ಅವಳ ಕುತ್ತಿಗೆಗೆ ಸೀರೆ ಸುತ್ತಿದ್ದು, ಕಿವಿಯಿಂದ ರಕ್ತ ಬರುತ್ತಿತ್ತು. ನಮಗೆ ಹೆಣ ಮುಟ್ಟಲು ಬೇಡ ಎಂದು ಹೇಳಿದರು ಹಾಗೂ ಪೋಲೀಸರು ಅಲ್ಲಿಗೆ ಬಂದರು. ಹೆಣವನ್ನು ಆಸ್ಪತ್ರೆಗೆ ಸಾಗಿಸಿದರು. ಹನುಮಂತಪ್ಪ ಈ ಘಟನೆ ಕುರಿತಾಗಿ ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟನು. ಮದುವೆಯಾಗಿ 4 ವರ್ಷದ ಒಳಗೆ ಕುಸುಮ ತೀರಿಕೊಂಡಿದ್ದಾಳೆ.

11) ನಿಪಿ-10 ಮತ್ತು 11 ಕುಸುಮಳ ಮದುವೆಯ ಫೋಟೋಗಳಾಗಿರುತ್ತವೆ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

ಪಾಟೀಸವಾಲುಃ ಶ್ರೀ ಆರ್ ಕೆ ವಕೀಲರು ಆರೋಪಿ ನಂ. 1 ರಿಂದ 3 ರವರ ಪರ ವಕೀಲರಿಂದ.

12) ನಾನು ಲಿಂಗದಹಳ್ಳಿಯ ಖಾಯಂ ನಿವಾಸಿಯಾಗಿರುತ್ತೇನೆ. ಕುಸುಮಳ ತವರ ಮನೆ ಮೆಳ್ಳೆಕಟ್ಟೆ ಆರೋಪಿ ನಂ.1 ರವರೊಂದಿಗೆ ಕುಸುಮಳ ಮದುವೆಯಾಗುವುದಕ್ಕಿಂತ ಪೂರ್ವ ಕಂಬತ್ತನ ಹಳ್ಳಿಯ ಸಿದ್ದಪ್ಪ ಮಾಸ್ಟರ್ ರವರ ಮಗನಿಗೆ ಮದುವೆ ನಿಶ್ಚಿತಾರ್ಥ ವಾಗಿತ್ತು ಎಂಬುದು ನಿಜ ಸಾಕ್ಷಿಯು ಅವರು ಜಗಳೂರು

ವಾಸಿಯಾಗಿದ್ದರು. ಅವರು ಕೇಳಿದ್ದಷ್ಟು ವರದಕ್ಷಿಣೆ ಕೊಡಲು ಸಾಧ್ಯವಾಗದ ಕಾರಣ ಆ ಮದುವೆ ಮುರಿದು ಹೋಯಿತು ಎನ್ನುವುದು ಸುಳ್ಳು .

13) ಆರೋಪಿ 1 ಮತ್ತು ಕುಸುಮಳ ಮಾತುಕತೆ ಸಂದರ್ಭದಲ್ಲಿ ನಾನು ಇದ್ದೇನೆ ಎಂದು ಹೇಳಿದ್ದೇನೆ ಆರೋಪಿ ಕಡೆಯಿಂದ ಯಾರು ಇದ್ದರು ಎಂದರೆ ಸಾಕ್ಷಿಯು ಆರೋಪಿತರು ಮತ್ತು ಕೆಲವು ಜನ ಇದ್ದರು ಅವರು ಯಾರು ಎಂದು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಮದುವೆ ಮಾತುಕತೆಯಲ್ಲಿ ಪಾಲ್ಗೊಂಡಿಲ್ಲ ಅನ್ನುವುದು ಸುಳ್ಳು

14) ಆ ಸಮಯದಲ್ಲಿ ಒಂದು ತೊಲೆ ಬಂಗಾರದ ಮೌಲ್ಯ ಎಷ್ಟು ಇತ್ತು ಎಂದರೆ ಸಾಕ್ಷಿಯು 24 ಕ್ಯಾರೆಟ್ ಬಂಗಾರದ ಮೌಲ್ಯ ಒಂದು ತೊಲೆಗೆ ರೂ. 30,000/- ಇತ್ತು ಎನ್ನುತ್ತಾರೆ ಆ ಬಂಗಾರ ಘಟ್ಟಿ ಕೊಟ್ಟಿರಾ ಅಥವಾ ಆಭರಣಕೊಟ್ಟಿರಾ ಎಂದರೆ ಸಾಕ್ಷಿ ಆಭರಣ ಮುಖಾಂತರ ಕೊಟ್ಟಿದ್ದೇವೆ ಎನ್ನುತ್ತಾರೆ.

15) 5 ತೊಲೆ ಬಂಗಾರ ಆರೋಪಿ 1 ರವರಿಗೆ ಕೊಟ್ಟಿದ್ದಾಗಿ ಹೇಳಿದ್ದಾರಾ , ಏನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಆರೋಪಿ 1 ರವರಿಗೆ ಒಂದು ಬ್ರಾಸ್ಲೇಟ್ , ಉಂಗುರ ಹಾಗೂ ಚೈನು ಮಾಡಿಸಿಕೊಟ್ಟಿದ್ದೇವೆ ಎನ್ನುತ್ತಾರೆ. ಮೃತಳ ಪಾಲಕರು ಮೆಳ್ಳಕಟ್ಟೆ ಗ್ರಾಮದಲ್ಲಿ 14 ಅಡಿ ಅಗಲ, 50 ಅಡಿ ಉದ್ದದ ಕರಿಹಂಚಿನ ಮೇಲ್ಚಾವಣಿ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಕರಿಹಂಚಿನ ಮೇಲ್ಚಾವಣಿ ಇದೆ ಆದರೆ ಉದ್ದ-ಅಗಲ ಜಾಸ್ತಿ ಇದೆ. ಉದ್ದ 50 ಅಡಿ, ಅಗಲ 14 ಅಡಿಗಿಂತ ಹೆಚ್ಚು ಇದೆ ಅಂತ ಹೇಳುತ್ತಾರೆ.

16) ನಾವು ವೀರಶೈವ ಸಾಧು ಲಿಂಗಾಯತರು ಎಂಬುದು ನಿಜ. ಮದುವೆಯ ಸಮಯದಲ್ಲಿ ವರನಿಗೆ ಉಂಗುರ ಅಥವಾ ಚೈನು ಅಥವಾ ಬ್ರಾಸಲೈಟು ಉಡುಗೊರೆಯಾಗಿ ಕೊಡುವ ಸಂಪ್ರದಾಯವಿದೆ ಅನ್ನುವುದು ಸುಳ್ಳು .

17) ಆರೋಪಿ 2 ಮತ್ತು 3 ಇವರಿಗೆ ರುದ್ರೇಶ್ ಎಂಬ ಎರಡನೇ ಮಗ ಇದ್ದಾನೆ ಎಂದರೆ , ಸಾಕ್ಷಿ ಇನ್ನೊಬ್ಬ ಮಗ ಇದ್ದಾನೆ ಹೆಸುರು ಗೊತ್ತಿಲ್ಲ ಎನ್ನುತ್ತಾರೆ. ಆತ ಇಂಜಿನಿಯರಿಂಗ್ ಮತ್ತು ಎಂ.ಎಸ್ ಮುಗಿಸಿ ಅಮೇರಿಕಾದ ಪೋರ್ಡ್ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ ಹಾಗೂ ತಿಂಗಳಿಗೆ 11,000 ಡಾಲರ್ ಸಂಬಳ ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಮದುವೆಯ ಸಮಯದಲ್ಲಿ ಮೋಟಾರ್ ಸೈಕಲಿಗೆ ಸಂಬಂಧಪಟ್ಟಂತೆ ದುಡ್ಡನ್ನು ರುದ್ರೇಶ್ ಕಳುಹಿಸಿದ್ದಾನೆ ಇದನ್ನು ನೀವು ಹನುಮಂತನಿಗೆ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾನು ಕೇಳಿಲ್ಲ ಅದರೆ ದುಡ್ಡು ಕೊಟ್ಟಿದ್ದು ನಾವೇ ಎನ್ನುತ್ತಾರೆ .

18) ಕುಸುಮಳ ಮದುವೆ ಸಮಯದಲ್ಲಿ ಅವಳ ಅಣ್ಣನ ಮದುವೆಯೂ ಸಹ ಜರುಗಿತು ಎಂಬುದು ನಿಜ. ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪವು ದಾವಣಗೆರೆಯಲ್ಲಿ ಹಳೆಯ ಮತ್ತು ಚಿಕ್ಕ ಕಲ್ಯಾಣ ಮಂಟಪ ಎನ್ನುವುದು ನಿಜ. ಸುಮಾರು 200 ರಿಂದ 250 ಜನರನ್ನು ಹಿಡಿಸುವ ಕಲ್ಯಾಣಮಂಟಪವಾಗಿದೆ ಎಂಬುದು ನಿಜ.

19) ಆರೋಪಿತರು ಸಾಕಷ್ಟು ಅಡಿಕೆ ತೋಟ ಹಾಗೂ ನೀರಾವರಿ ಜಮೀನು ಹೊಂದಿದ್ದಾರೆ ಎಂದರೆ ಸಾಕ್ಷಿಯು ಈಗ ಇರಬಹುದು ಆಗ ಕಡಿಮೆ ಇತ್ತು ಎನ್ನುತ್ತಾರೆ.

20) ಕುಸುಮಳ ಮದುವೆ ಆದ ಮೇಲೆ ನಾನು ಅವಳ ಗಂಡನ ಮನೆಗೆ ಹೋಗಿಲ್ಲ ಎನ್ನುವುದು ಸುಳ್ಳು.

21) ಮದುವೆಯ ಸಮಯದಲ್ಲಿ ವರದಕ್ಷಿಣೆ ಎಂದು 25 ತೊಲೆ ಬಂಗಾರ, ಎರಡೂವರೆ ಲಕ್ಷ ಹಣ ಹಾಗೂ ರೂ.65,000/- ಬೈಕಿಗಾಗಿ ಕೊಟ್ಟಿದ್ದೆವು ಎಂದು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹೇಳಿದ್ದೇನೆ ಎನ್ನುವುದು ಸುಳ್ಳು. ಆರೋಪಿ 1 ಈತನಿಗೆ ಅದರಲ್ಲಿ 5 ತೊಲೆ ಬಂಗಾರದ ಆಭರಣ ಮಾಡಿಸಿ ಹಾಕಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

22) ಕುಸುಮಳ ಮದುವೆಯಾದ ನಂತರ ಅವಳ ಗಂಡನ ಮನೆಗೆ ನಾನು ಹೋಗಿಯೇ ಇಲ್ಲ ಅನ್ನುವುದು ಸುಳ್ಳು . ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

23) ಮೃತ ಕುಸುಮಳು ಬಾಲ್ಯವನ್ನು ಅವಳ ದೊಡ್ಡಪ್ಪನಾದ ಶಾಂತಲಿಂಗಪ್ಪ ಚಾಸಾ-11 ರವರ ಮನೆಯಲ್ಲಿಯೇ ಕಳೆದಿದ್ದಾಳೆ ಎಂದರೆ ಸಾಕ್ಷಿಯು ವಿದ್ಯಾಭ್ಯಾಸಕ್ಕಾಗಿ ಮಾತ್ರ ಶಾಂತಲಿಂಗಪ್ಪನ ಮನೆಯಲ್ಲಿದ್ದಳು ಎನ್ನುತಾರೆ. ಅವಳು ಬಾಲ್ಯವನ್ನು ಶಾಂತಲಿಂಗಪ್ಪನ ಮನೆಯಲ್ಲಿ ಕಳೆದಿದ್ದರಿಂದ ಒಡಹುಟ್ಟಿದ ಅಣ್ಣ ಚಾಸಾ-1 ಹನುಮಂತಪ್ಪನೊಂದಿಗೆ ಅಷ್ಟು ಬಾಂದವ್ಯ ಇರಲಿಲ್ಲ ಎನ್ನುವುದು ಸುಳ್ಳು.

24) ಕುಸುಮಳ ಸೋದರತ್ತೆ ಪಾಲಾಕ್ಷಮ್ಮ ಆಸ್ತಿ ವಿಭಾಗಕ್ಕೆ ದಾವಾ ಕುಸುಮಳ ತಂದೆ ಮತ್ತು ಅವಳ ತಂದೆಯ ಹೋದರರ ಮೇಲೆ ಹಾಕಿದ್ದಳು ಎನ್ನುವುದು ನಿಜ. ಅದು ನ್ಯಾಯಾಲಯದಲ್ಲಿ (ಆರ್.ಎ.28/2022) ಕಾಂಪ್ರಮೈಸ್ ಆಯಿತು ಎನ್ನುವುದು ಇದೆ. ಕುಸುಮ ಸಾಯುವ ಕೆಲವು ದಿನಗಳ ಹಿಂದೆ ತವರು ಮನೆಗೆ ಹೋಗಿದ್ದಳು ಎನ್ನುವುದು ನಿಜ. ಆ ಸಮಯದಲ್ಲಿ ಕುಸುಮ ಚಾಸಾ-1 ಇವರಿಗೆ ಆಸ್ತಿ ಪಾಲು ಕುರಿತಾಗಿ ವಾಗ್ವಾದ ಆಯಿತು ಎನ್ನುವುದು ಸುಳ್ಳು .

25) ಪ್ರತಿಸಲ ಕುಸುಮ ತವರು ಮನೆಗೆ ಬಂದಾಗ ವಾಪಸ್ಸು ಹೋಗುವಾಗ ಚಾಸ-1 ಇವನೇ ಅವಳನ್ನು ಗಂಡನ ಮನೆಗೆ ಹೋಗಿ ಕಳುಹಿಸುತ್ತಿದ್ದ ಎಂದರೆ ಯಾರೋ ಒಬ್ಬರು ಹೋಗುತ್ತಿದ್ದರು ಎನ್ನುತ್ತಾರೆ. ಕೊನೆಯ ಸಲ ತವರು ಮನೆಯಿಂದ ಅವಳನ್ನು ಬಿಡಲು ಚಾಸಾ-1 ಬರದೇ ಅವಳ ಚಿಕ್ಕಪ್ಪ ಚಂದ್ರಶೇಖರ ಬಂದು ಬಿಟ್ಟು ಹೋದ ಎನ್ನುವುದು ಸುಳ್ಳು.

26) ನಾನು ಕುಸುಮಳ ಹೆಣವನ್ನು ನೋಡಲು ಹೋದಾಗ ಮೊದಲೇ ನನ್ನ ಅಣ್ಣ ಹಾಗೂ 4-5 ಜನ ಕುಸುಮಳ ಹೆಣದ ಜೊತೆಗೆ ಇದ್ದರು. ನಾನು ಕುಸುಮಳ ಹೆಣದ ಹತ್ತಿರ ಹೋದಾಗ ಅರ್ಧ ಗಂಟೆಯೊಳಗೆ ಪೋಲೀಸರು ಅಲ್ಲಿಗೆ ಬಂದರು. ಪೋಲೀಸರು ಎಂದರೆ ಇನ್ಸಪೆಕ್ಟರ್ ಹೆಡ್‌ಕಾನ್ಸಟೇಬಲ್ ಗಳು ಇದ್ದರು. ಆ ಪೊಲೀಸರು ನನ್ನ ಅಣ್ಣನ ಹೇಳಿಕೆಯನ್ನು ಮಾಡಿಕೊಂಡರು. ನನ್ನ ಹೇಳಿಕೆಯನ್ನು ರಾತ್ರಿ ಪಡೆದರು.

27) ಅದಾದ 2 ದಿನದ ನಂತರ ನನ್ನನ್ನು ಇನ್ಸಪೆಕ್ಟರ್ ಕರೆಯಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು. ನಂತರ ನನ್ನನ್ನು ಪೊಲೀಸ್ ಠಾಣೆಗೆ ಕರೆದಿಲ್ಲ ಹಾಗೂ ಹೇಳಿಕೆ ಪಡೆದುಕೊಂಡಿಲ್ಲ. ಪೊಲೀಸರು ಬಂದ ನಂತರ ಒಂದು ಗಂಟೆಯಲ್ಲಿಯೇ ಹೆಣವನ್ನು ಎತ್ತಿದರು. ನಂತರ ಅಂಬ್ಯುಲೆನ್ಸ ಬಂದು ಹೆಣವನ್ನು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ.

28) ನಾನು ಕುಸುಮಳ ಹೆಣದ ಹತ್ತಿರ ಹೋದಾಗ ಅಲ್ಲಿ ಚಾಸಾ-1 ಮತ್ತು ಶಾಂತಲಿಂಗಪ್ಪನ ಮಗ ರುದ್ರೇಶ್ ಅವರನ್ನು ನೋಡಿದ್ದಿರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ಅವರ ಹೇಳಿಕೆಗಳನ್ನು ಪೊಲೀಸರು ಪಡೆದಿದ್ದಾರಾ ಎಂದರೆ ಸಾಕ್ಷಿಯು ನೋಡಿಲ್ಲ ಎನ್ನುತ್ತಾರೆ.

29) ದಿಃ 19-08-2017 ರಂದು ಆರೋಪಿ 1 ಮತ್ತು 2 ರವರು ಹೊಲಕ್ಕೆ ಕೆಲಸಕ್ಕೆ ಹೋಗಿದ್ದರು, 3 ನೇ ಆರೋಪಿ ತನ್ನ ಮಗಳ ಹೆರಿಗೆಯಾದ ಕಾರಣ ಬೆಂಗಳೂರಿಗೆ ಹೋಗಿದ್ದಳು ಎನ್ನುವುದು ಸುಳ್ಳು. ಆ ಸಮಯದಲ್ಲಿ ಚಾಸಾ-1 ಮತ್ತು ರುದ್ರೇಶಿ ಬಂದು ಕುಸುಮಳೊಂದಿಗೆ ಜಗಳವಾಡಿದ್ದರು ಮತ್ತು ಹತ್ಯೆ ಮಾಡಿದರು ಎನ್ನುವುದು ಸುಳ್ಳು.

30) ನಾನು ಹೋದಾಗ ರುದ್ರೇಶಿ ಮತ್ತು ಚಾಸಾ-1 ಇವರನ್ನು ನೋಡಿಲ್ಲ ಎನ್ನುವುದು ಸುಳ್ಳು. ಚಾಸಾ-1 ಇಂದು ಕೋರ್ಟಗೆ ಬಂದಿದ್ದಾನೆ ಎನ್ನುವುದು ನಿಜ. ಆದರೆ ನಾನು ಮತ್ತು ಅವನು ಜೊತೆಗೆ ಬಂದಿದ್ದೇವೆ ಎನ್ನುವುದು ಸುಳ್ಳು. ಹೆಣದ ಹತ್ತಿರ ಬಂದ ಪೋಲೀಸರು ಹೆಣದ ಪಂಚನಾಮೆಯನ್ನು ಮಾಡಿದರು ಮತ್ತು ಸಾಕ್ಷಿಯು ನಮಗೆ ಒಳಗೆ ಬಿಡದೇ ಏನು ಮಾಡಿದರು ಗೊತ್ತಿಲ್ಲ ಎನ್ನುತ್ತಾರೆ.

31) ಪೊಲೀಸರು ನಿಮ್ಮ ಹೇಳಿಕೆಯನ್ನು ದಿಃ 21-09-2017 ರಂದು ಮಾಡಿಕೊಂಡಿದ್ದಾರೆಂದು ಇಲ್ಲಿ ದಾಖಲೆ ಹಾಕಿದ್ದಾರೆ ಎಂದರೆ ಅದರಲ್ಲಿ ತಿಂಗಳು ತಪ್ಪಾಗಿದೆ ಎನ್ನುತ್ತಾರೆ. ನನ್ನ ಹೇಳಿಕೆಯಲ್ಲಿ ಪೊಲೀಸರು " ಅಕ್ಷರಲ್ಲಿ ದಿಃ19-08-2018 ರಂದು ಮಧ್ಯಾಹ್ನ 12-30 ರಿಂದ 1-00 ಗಂಟೆ ಸುಮಾರಿಗೆ ಹನುಮಂತ ನಮ್ಮ ಅಣ್ಣ ಶಿವಮೂರ್ತಿಗೆ ಫೋನ್ ಮಾಡಿದ್ಧ ------------- ದಿಕ್ಕೆ ತೋಚುತ್ತಿಲ್ಲ." ಎಂದು ಹೇಳಿದ್ದೇನೆ ಶಿವಮೂರ್ತಿ ಎಂದರೆ ನೀವೇ ಎಂದರೆ ಸಾಕ್ಷಿಯು ಅಲ್ಲಿಯೂ ಸಹ ಪ್ರಿಂಟ್ ತಪ್ಪಾಗಿದೆ ಎನ್ನುತ್ತಾರೆ ಸದರಿ ಹೇಳಿಕೆಯ ಭಾಗವನ್ನು ನಿಡಿ-21 ಎಂದು ಗುರುತಿಸಲಾಯಿತು.

32) ಪೊಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ "ನಮ್ಮ ಅಣ್ಣ ಶಿವಮೂರ್ತಿ" ಎಂದು 5-6 ಬಾರಿ ಹೇಳಿದ್ದು ನಿಮಗೆ ಶಿವಮೂರ್ತಿ ಎನ್ನುವ ಅಣ್ಣ ಇಲ್ಲ ಎಂದರೆ ನಾನೇ ಶಿವಮೂರ್ತಿ ಎನ್ನುತ್ತಾರೆ.

33) ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ " ದಿಃ18-09-2017 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ನನ್ನ ಸೊಸೆ ಕುಸುಮ .................. ವಿಚಾರವೇನೆಂದರೆ" ಎಂದು ಹೇಳಿದ್ದೇನೆ ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿ-22 ಎಂದು ಗುರುತಿಸಲಾಯಿತು. ಸಾಕ್ಷಿಯು ಅದು ತಾರೀಖು ದಿಃ18-08-2017 ಆಗಿರುತ್ತದೆ ಎನ್ನುತ್ತಾರೆ.

34) ಶಾಂತಲಿಂಗಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ವರದಕ್ಷಿಣೆ ಬೇಡಿಲ್ಲ, ಹಾಗೂ ಬೇಡಿಕೆ ಇಟ್ಟಿಲ್ಲ ಅನ್ನುವುದು ಸುಳ್ಳು , ಆರೋಪಿಗಳು ಕುಸುಮಳೊಂದಿಗೆ ಅನ್ಯೋನ್ಯವಾಗಿದ್ದರು ಎನ್ನುವುದು ಸುಳ್ಳು. ಯಾವುದೇ ಕಿರುಕುಳ ಕೊಟ್ಟಿಲ್ಲ ಎನ್ನುವುದು ಸುಳ್ಳು.

35) ನಾನು ಪಂಚಾಯಿತಿಗಾಗಿ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.